61
10
16/01

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀಮತಿ ಹೇಮಲತಾ ನಾಯಕ್ ಇವರು ನಿಯಮ-330 ರಡಿ ಗಮನ ಸೆಳೆಯುವ ಸೂಚನೆಗೆ ಉತ್ತರಿಸುವ ಬಗ್ಗೆ.**

**ಪ್ರಶ್ನೆ:-**

ಕೊಪ್ಪಳ ನಗರದ ಹೃದಯ ಭಾಗದಲ್ಲಿರುವ ಐತಿಹಾಸಿಕ ಹಾಗೂ ಧಾರ್ಮಿಕ ಪ್ರಾಮುಖ್ಯತೆಯುಳ್ಳ ಹುಲಿಕೆರೆಯ ಮೂಲ ಪ್ರದೇಶ ಹಾಗೂ ಅದರ ಸುತ್ತಮುತ್ತಲಿನ ಬಫರ್ ಜೋನ್ ಪ್ರದೇಶವನ್ನು ಕೆಲವರು ಅತಿಕ್ರಮಣ ಸರ್ಕಾರದ ಅನುಮತಿ ಇಲ್ಲದೆ ಕೆರೆಯ ಕೆಲವು ಭಾಗಗಳನ್ನು ಭೂ-ಸ್ವರೂಪ ಬದಲಾವಣೆ ಮಾಡಿ ವೈಯಕ್ತಿಕ ಉಪಯೋಗಕ್ಕೆ ಬಳಸಲಾಗುತ್ತಿದೆ.

ಸಾರ್ವಜನಿಕ ಹಿತದೃಷ್ಟಿಯಿಂದ ಹಾಗೂ ಪರಿಸರ ಸಂರಕ್ಷಣೆಯ ಹಿನ್ನೆಲೆಯಲ್ಲಿ ಹುಲಿಕೆರೆಯ ಸಂಪೂರ್ಣ ಪ್ರದೇಶವನ್ನು ತಕ್ಷಣವೇ ಸರ್ವೆ ಇಲಾಖೆಯಿಂದ ಮರು ಅಳತೆ ಮಾಡಿಸಿ ನಿಖರ ಗಡಿ ಗುರುತಿಸುವ ಕಾರ್ಯ ಕೈಗೊಳ್ಳುವುದು. ಅತಿಕ್ರಮಣಗಳ ಕುರಿತು ಸಮಗ್ರ ವರದಿ ಸಿದ್ಧಪಡಿಸಿ ಸಂಬಂಧಿಸಿದ ಕಾನೂನು ಪ್ರಕಾರ ಕ್ರಮ ಜರುಗಿಸುವುದು. ಕೆರೆಯ ಮೂಲಸ್ವರೂಪ ಮತ್ತು ಸ್ವಾಭಾವಿಕ ನೀರು ಹರಿವು ಮಾರ್ಗಗಳನ್ನು ಸಂರಕ್ಷಿಸುವ ಉದ್ದೇಶದಿಂದ ಶಾಶ್ವತ ಸಂರಕ್ಷಣಾ ಯೋಜನೆ ರೂಪಿಸುವ ಬಗ್ಗೆ.

**ಉತ್ತರ:-**

ಕೊಪ್ಪಳ ನಗರದ ಹುಲಿಕೆರೆಯ ಸಂಪೂರ್ಣ - ಸರ್ವೆ ಕಾರ್ಯವನ್ನು ಸಹಾಯಕ ನಿರ್ದೇಶಕರು, ಭೂದಾಖಲೆಗಳ ಇಲಾಖೆ ಕೊಪ್ಪಳ ತಂಡದಿಂದ ಮಾಡಿಸಲಾಗುತ್ತಿದ್ದು, ಸರ್ವೆ ಕಾರ್ಯ ಮುಗಿದ ನಂತರ ಒತ್ತುವರಿ ಕಂಡು ಬಂದರೆ, ನಿಯಮಾನುಸಾರ ತೆರವುಗೊಳಿಸಲು ಕ್ರಮ ಕೈಗೊಳ್ಳಲಾಗುವುದು. ದಿನಾಂಕ:25-02-2026ರಂದು ಕೆರೆಯ ದಡದಲ್ಲಿ ನಿಯಮಬಾಹಿರವಾಗಿ ಮಣ್ಣು ಸುರಿದು ನಿರ್ಮಿಸಲಾಗಿದ್ದ ಅನಧಿಕೃತ ರಸ್ತೆಯನ್ನು ಸಂಪೂರ್ಣವಾಗಿ ತೆರವುಗೊಳಿಸಿ ಕೆರೆಯ ನೈಸರ್ಗಿಕ ಸ್ವರೂಪವನ್ನು ಸಂರಕ್ಷಿಸುವ ನಿಟ್ಟಿನಲ್ಲಿ ಕ್ರಮವಹಿಸಲಾಗಿದೆ.

ಕೆರೆಯ ಮೂಲಸ್ವರೂಪ ಮತ್ತು ಸ್ವಾಭಾವಿಕ ನೀರು ಹರಿವು ಮಾರ್ಗಗಳನ್ನು ಸಂರಕ್ಷಿಸುವ ಉದ್ದೇಶದಿಂದ ಸದರಿ ಅತಿಕ್ರಮಣವನ್ನು/ ಒತ್ತುವರಿ ಮಾಡಿರುವ ಕೆರೆಯ ಜಾಗವನ್ನು ಹದ್ದುಬಸ್ತ್ ಗುರುತಿಸುವ ಕಾರ್ಯವು ಪ್ರಗತಿಯಲ್ಲಿರುತ್ತದೆ. ಕೆರೆಯ ಮೂಲ ಸ್ವರೂಪವನ್ನು ಹದ್ದುಬಸ್ತ್ ಗುರುತಿಸಿದ ನಂತರ ಯಾವುದೇ ರೀತಿಯ ತೊಂದರೆಗಳಾಗದಂತೆ ಕ್ರಮವಹಿಸಲಾಗುವುದು.

ಕೊಪ್ಪಳ ನಗರಾಭಿವೃದ್ಧಿ ಪ್ರಾಧಿಕಾರದಿಂದ ಸದರಿ ಕರೆ ಅಭಿವೃದ್ಧಿಪಡಿಸಲು ವಿಸ್ತೃತ ಯೋಜನಾ ವರದಿಯನ್ನು ಸಿದ್ಧಪಡಿಸಲಾಗುತ್ತಿದ್ದು ಕೆರೆಯನ್ನು ಅಭಿವೃದ್ಧಿಗೊಳಿಸಲು ಕೆರೆ ಸಂರಕ್ಷಣೆ ಮತ್ತು ಅಭಿವೃದ್ಧಿ ಪ್ರಾಧಿಕಾರದ ಪ್ರಕಾರ ಕ್ರಮ ಜರುಗಿಸಲಾಗುವುದು.

ಸಂಖ್ಯೆ: ನಅಇ 86 ಜಿಇಎಲ್ 2026 (ಇ)

**(ರಹೀಂ ಖಾನ್)**
ಪೌರಾಡಳಿತ ಮತ್ತು ಹಜ್ ಸಚಿವರು